# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 41

**ಸ್ವಾಮಿ ನಿತ್ಯಸ್ಥಾನಂದ**

### ಮಾಯೆ ಮತ್ತು ಅಹಂ

**ವಿಜಯ:** ‘‘ಮಹಾಶಯರೇ, ಏಕೆ ಹೀಗೆ ನಾವು ಬದ್ಧರಾಗಿ ಬಿಟ್ಟಿದ್ದೇವೆ? ನಾವು ಏಕೆ ಭಗವಂತನನ್ನು ನೋಡಲಾಗುತ್ತಿಲ್ಲ?’’

**ಶ್ರೀರಾಮಕೃಷ್ಣರು:** ‘‘ಜೀವರ ‘ಅಹಂ’ ಎಂಬುದೇ ಮಾಯೆ. ಈ ‘ಅಹಂ’ ಎಂಬುದು ಎಲ್ಲವನ್ನೂ ಮರೆಸಿಬಿಟ್ಟಿದೆ. ಈ ‘ಅಹಂ’ ಸತ್ತಿತು ಎಂದರೆ ಎಲ್ಲ ತೊಂದರೆಗಳೂ ಕೊನೆಗಾಣುವುವು. ಭಗವಂತನ ಕೃಪೆಯಿಂದ ನಾನು ಅಕರ್ತ ಎಂಬ ಬೋಧೆ ವ್ಯಕ್ತಿಗೆ ಬಂದುಬಿಟ್ಟಿದ್ದೇ ಆದರೆ, ಆತ ಜೀವನ್ಮುಕ್ತನಾಗಿಬಿಡುತ್ತಾನೆ. ಬಳಿಕ ಅವನಿಗೆ ಯಾವ ಹೆದರಿಕೆಯೂ ಇರದು.

‘‘ಈ ಮಾಯೆ, ಅಂದರೆ ‘ಅಹಂ’ ಎಂಬುದು, ಒಂದು ಚೂರು ಮೋಡ ಇದ್ದ ಹಾಗೆ. ಈ ಚೂರು ಮೋಡದ ದೆಸೆಯಿಂದ ಸೂರ್ಯನನ್ನು ನೋಡಲಾಗುವುದಿಲ್ಲ. ಅದು ಸರಿದುಹೋದೊಡನೆಯೇ ಸೂರ್ಯ ಕಾಣಿಸಿಕೊಳ್ಳುತ್ತಾನೆ. ಗುರುವಿನ ಕೃಪೆಯಿಂದ ಈ ‘ಅಹಂ’ ಎಂಬುದು ನಾಶವಾಯಿತು ಎಂದರೆ ಭಗವಂತನ ದರ್ಶನ ದೊರೆತುಬಿಡುತ್ತದೆ.’’

*(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು. ೧೨೭)*

ಒಂದು ಯಂತ್ರದಲ್ಲಿ ಚೈತನ್ಯವಿದ್ದಿದ್ದರೆ ಅದು ತಾನೇ ಕರ್ತೃ ಎಂದು ತಿಳಿಯುತ್ತಿತ್ತು. ವಿದ್ಯುತ್‌ಶಕ್ತಿಯೂ ಹಾಗೆ ತಿಳಿಯುತ್ತಿತ್ತು. ಆದರೆ ಅವೆರಡೂ ಯಜಮಾನನ ಇಚ್ಛೆಯಂತೆ ಕೆಲಸ ಮಾಡುತ್ತಿರುವುದು. ಹೀಗೆಯೇ ನಾವು ಮಾಡುವ ಎಲ್ಲ ಕೆಲಸಗಳೂ ಕೂಡ. ನಮಗೆ ಕರ್ತೃತ್ವವೂ ಇಲ್ಲ, ಭೋಕ್ತೃತ್ವವೂ ಇಲ್ಲ; ಇವೆರಡೂ ಭಗವಂತನಿಗೆ ಸೇರಿದವು. ಈ ‘ನಾನು’ ಎಂಬುದು ಹೋಗಬೇಕು. ಅದೊಂದು ಸುಳಿ. ನದಿಯ ಸುಳಿಯು ನಮ್ಮನ್ನು ಕರೆಯುವುದಿಲ್ಲ, ನಾವೇ ಹೋಗಿ ಅದರಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ. ಹಾಗೆಯೇ ಪ್ರಕೃತಿಯು ಒಂದು ಬೃಹತ್ ಪ್ರವಾಹ, ಅದರ ಸುಳಿಯಲ್ಲಿ ನಾವು ಸಿಕ್ಕಿಕೊಂಡಿದ್ದೇವೆ. ಈ ದೇಹೇಂದ್ರಿಯಮನಸ್ಸುಗಳಿಂದ ಕೂಡಿರುವ ‘ಅಹಂ’ ಭಾವವೇ ಈ ಸುಳಿ. ಇದರಿಂದ ನಾವು ತಪ್ಪಿಸಿಕೊಳ್ಳಬೇಕಾಗಿದೆ. ಅದೇ ಮುಕ್ತಿ. ತಪ್ಪಿಸಿಕೊಂಡ ಮೇಲೂ ಸುಳಿ ತನ್ನ ಪಾಡಿಗೆ ತಾನು ಸುತ್ತುತ್ತಿರುತ್ತದೆ. ಆದ್ದರಿಂದ ಕರ್ಮದೊಡನೆ ತಾದಾತ್ಮ್ಯ ಭಾವವನ್ನು ಸಂಪೂರ್ಣವಾಗಿ ಬಿಡುವುದೇ ನಿಜವಾದ ಬಿಡುಗಡೆ.

**ಶ್ರೀರಾಮಕೃಷ್ಣರು:** ‘‘ಜೀವ ಸಚ್ಚಿದಾನಂದನೇ ಅಲ್ಲದೆ ಬೇರೆ ಏನೂ ಅಲ್ಲ. ಆದರೆ ಈ ಮಾಯೆ, ಎಂದರೆ ಅಹಂಕಾರ ಅನೇಕ ಉಪಾಧಿಗಳನ್ನು ಸೃಷ್ಟಿಸಿರುವುದರಿಂದ ಆತ ತನ್ನ ನಿಜಸ್ವರೂಪವನ್ನು ಮರೆತುಬಿಟ್ಟಿದ್ದಾನೆ.

‘‘ಪ್ರತಿಯೊಂದು ಉಪಾಧಿಯೂ ಮನುಷ್ಯನ ಸ್ವಭಾವವನ್ನು ಬದಲಾಯಿಸಿಬಿಡುತ್ತದೆ. ಆತನೇನಾದರೂ ಕರಿ ಅಂಚಿನ ಪಂಚೆ ಉಟ್ಟುಕೊಂಡ ಅಂದರೆ ಹೇಳದೆ ಕೇಳದೆ ಆತನ ಬಾಯಿಂದ ನಿಧುಬಾಬುವಿನ ಪ್ರಣಯಗೀತೆಗಳು ಹೊರಬರಲಾರಂಭಿಸುತ್ತವೆ. ಬಳಿಕ ಇಸ್ಪೀಟು ಆಡುವುದು, ಗಾಳಿ ಸಂಚಾರಕ್ಕೆ ಹೋದಾಗ ವಾಕಿಂಗ್ ಸ್ಟಿಕ್ ಹಿಡಿದುಕೊಂಡು ಹೋಗುವುದು ಇವೆಲ್ಲ ಶುರುವಾಗಿಬಿಡುತ್ತದೆ...’’

*(ಅಲ್ಲೇ, ಪು. ೧೨೮)*

ಇದು ನಾಟಕದ ಪಾತ್ರಧಾರಿಗಳು, ತಾವು ಪಾತ್ರಧಾರಿಗಳು ಎಂಬುದನ್ನು ಮರೆತು, ತಮ್ಮ ತಮ್ಮ ಪಾತ್ರದೊಡನೆ ತಮ್ಮನ್ನು ಒಂದಾಗಿಸಿಕೊಂಡಂತಾಗುತ್ತದೆ. ಶ್ರೀರಾಮಕೃಷ್ಣರು ಬಾಲ್ಯಕಾಲದಲ್ಲಿ ಶಿವನ ಪಾತ್ರಧಾರಿಗಳಾಗಿ ಶಿವನೊಡನೆ ಒಂದಾಗಿಬಿಟ್ಟರು, ಹಾಗಾಗಿ ನಾಟಕ ಮುಂದುವರಿಯಲೇ ಇಲ್ಲ. ಆದರೆ ಅಲ್ಲಿ ನೆರೆದವರಿಗೆಲ್ಲ ಶಿವನ ದರ್ಶನವಾದಂತಾಯಿತು. ಇದು ಒಳ್ಳೆಯದೇ. ಆದರೆ ಕೆಲವು ಸಂದರ್ಭಗಳಲ್ಲಿ ಈ ರೀತಿಯ ತಾದಾತ್ಮ್ಯ ಅನಾಹುತಕ್ಕೆ ಕಾರಣವಾಗಬಹುದು. ಉದಾಹರಣೆಗೆ, ರಾಮ-ರಾವಣರ ಯುದ್ಧದ ಪ್ರಸಂಗದಲ್ಲಿ ರಾಮನ ಪಾತ್ರಧಾರಿಯು ತಾನು ರಾಮನೇ ಎಂದು ಭಾವಿಸಿದರೆ, ಎದುರಾಳಿ ರಾವಣನೇ ಆಗಿಬಿಡುತ್ತಾನೆ. ಇದರಿಂದಾಗಬಹುದಾದ ಗಂಡಾಂತರವನ್ನು ಊಹಿಸಬಹುದು.

ಅನೇಕರಲ್ಲಿ ಇತರರ ಗಮನ ಸೆಳೆಯುವ ಪ್ರವೃತ್ತಿ ಇರುತ್ತದೆ. ಇದಕ್ಕಾಗಿ ನಾನಾ ವೇಷಗಳನ್ನು ಧರಿಸುತ್ತಾರೆ, ವಿಚಿತ್ರ ರೀತಿಯಲ್ಲಿ ವರ್ತಿಸುತ್ತಾರೆ, ಅಥವಾ ಗಟ್ಟಿಯಾಗಿ ಮಾತನಾಡುತ್ತಾರೆ. ಕೆಲವರು ಇದಕ್ಕಾಗಿ ಹುಚ್ಚು ಸಾಹಸವನ್ನು ಮಾಡಬಹುದು. ಈ ರೀತಿ ಮಾಡುವುದರಿಂದ ಅವರು ತಮ್ಮ ಸಹಜತೆಯನ್ನು ಕಳೆದುಕೊಳ್ಳುತ್ತಾರೆ – ತಮ್ಮಿಂದ ತಾವು ದೂರವಾಗುತ್ತಾರೆ. ಇದರಿಂದಾಗಿ ಅವರು ಹೊರಗಿನ ಎಲ್ಲ ಪ್ರಭಾವಗಳಿಗೂ ಒಳಗಾಗುತ್ತಾ, ಕ್ಷಣ ಕ್ಷಣವೂ ಬದಲಾಗುತ್ತ, ಜೀವನದಲ್ಲಿ ಏನನ್ನೂ ಸಾಧಿಸಲಾಗದೆ ಅರ್ಥಹೀನ ಬಾಳನ್ನು ಬದುಕುತ್ತಾರೆ. ಶ್ರೀರಾಮಕೃಷ್ಣರು ಹೇಳುವಂತೆ, ಮಕ್ಕಳು ಕಂಬವನ್ನು ಹಿಡಿದು ಸುತ್ತುವಾಗ ಕಂಬವನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ಇಲ್ಲದಿದ್ದರೆ ಕೈಜಾರಿ ದೂರ ಬಿದ್ದುಬಿಡುತ್ತಾರೆ. ಹಾಗೆಯೇ ಆದರ್ಶದ ಕಂಬವನ್ನು ನಾವು

ಗಟ್ಟಿಯಾಗಿ ಹಿಡಿದುಕೊಳ್ಳದಿದ್ದರೆ ಘಟನೆಗಳ ಪ್ರವಾಹದಲ್ಲಿ ನಮ್ಮನ್ನು ನಾವು ಕಳೆದುಕೊಳ್ಳುತ್ತೇವೆ.

### ಧನಮದ

**ಶ್ರೀರಾಮಕೃಷ್ಣರು:** ''ಹಣವೂ ಒಂದು ದೊಡ್ಡ ಉಪಾಧಿ. ಹಣ ಕೈಗೆ ಬಂತು ಎಂದರೆ ಮನುಷ್ಯ ಬದಲಾವಣೆ ಹೊಂದಿ ಬಿಡುತ್ತಾನೆ. ಆತ ಹಿಂದಿನ ಮನುಷ್ಯನೇ ಅಲ್ಲದವನಾಗಿ ಬಿಡುತ್ತಾನೆ. ಒಬ್ಬ ಬ್ರಾಹ್ಮಣ ಇಲ್ಲಿಗೆ ಬಂದು ಹೋಗುವುದು ಮಾಡುವುದು ಮಾಡುತ್ತಿದ್ದ. ಹೊರಗಡೆ ನೋಡುವುದಕ್ಕೆ ಬಹಳ ವಿನಯಿಯಾಗಿದ್ದ. ಒಂದು ದಿನ ನಾನು ಹೃದಯನೊಡನೆ ಕೊನ್ನಗರಕ್ಕೆ ಹೋದೆ. ನಾವು ನೌಕೆಯಿಂದ ಇಳಿಯುವುದೇ ತಡ, ಆ ಬ್ರಾಹ್ಮಣ ಗಂಗಾದಡದಲ್ಲಿ ಕುಳಿತಿರುವುದು ಕಣ್ಣಿಗೆ ಬಿತ್ತು. ಬಹುಶಃ ಗಾಳಿ ಸೇವಿಸುತ್ತಾ ಕುಳಿತಿರಬೇಕು; ನಮ್ಮನ್ನು ಕಂಡು ಆತ ಕೂಗಲಾರಂಭಿಸಿದ: 'ಏನೂ, ಅರ್ಚಕರೋ! ಹೇಗಿದ್ದೀರಿ?' ಆತನ ಮಾತಿನ ಸ್ವರ ಕೇಳಿ ನಾನು ಹೃದುಗೆ ಹೇಳಿದೆ: 'ಓ ಹೃದು, ಈತನಿಗೆ ಹಣ ದೊರೆತಿರಬೇಕು. ಅದಕ್ಕಾಗಿ ಈತ ಹೀಗೆ ಮಾತನಾಡುತ್ತಿದ್ದಾನೆ.' ಹೃದು ನಗಲಾರಂಭಿಸಿದ.

''ಒಂದು ಕಪ್ಪೆ ಬಿಲದಲ್ಲಿ ಒಂದು ರೂಪಾಯಿ ಇಟ್ಟುಕೊಂಡಿತ್ತು. ಒಂದು ದಿನ ಒಂದು ಆನೆ ಆ ಬಿಲವನ್ನು ದಾಟಿ ಹೋಗುತ್ತಿತ್ತು. ಆಗ ಕಪ್ಪೆ ಕೋಪದಿಂದ ಬಿಲದ ಹೊರಕ್ಕೆ ಬಂದು ತನ್ನ ತೊಡೆ ತಟ್ಟುತ್ತ ಆನೆಯನ್ನು ಗದರಿಸಿತು: 'ಏನಿದು? ನನ್ನ ಬಿಲ ದಾಟಿಹೋಗುವಷ್ಟು ಕೆಚ್ಚು ನಿನಗೆ?' ಹಾಗೇ ನೋಡು, ಹಣದ ಮದವನ್ನು!'' *(ಅಲ್ಲೇ, ಪು. ೧೨೮)*

ಒಂದು ಸಾಮಾನ್ಯ ವಸ್ತು ನಮ್ಮನ್ನು ಹೇಗೆ ಕುಣಿಸುತ್ತದೆ ಎಂಬುದನ್ನು ಇದು ಸೂಚಿಸುತ್ತದೆ. ಒಂದು ಕಾಗದದ ತುಂಡಿಗೆ ನಾವೇ ಮೌಲ್ಯವನ್ನು ನೀಡಿರುವುದು. ಅದಕ್ಕೆ ಮೌಲ್ಯವನ್ನು ನೀಡಿ ನಮ್ಮ ಮೌಲ್ಯವನ್ನು ನಾವು ಕಳೆದುಕೊಳ್ಳುತ್ತೇವೆ, ಹಣಕ್ಕೆ ದಾಸರಾಗುತ್ತೇವೆ. ತಾನು ಯಾರ ತಲೆಯ ಮೇಲೆ ಕೈಯಿಟ್ಟರೂ ಅವನು ಸುಟ್ಟು ಭಸ್ಮವಾಗಬೇಕು, ಎಂದು ವರವನ್ನು ನೀಡಿದ ಶಿವನ ತಲೆಯ ಮೇಲೆ ಕೈ ಇಡಲು ಹೋದನಂತೆ ಭಸ್ಮಾಸುರ. ಹಾಗೆಯೇ ಮನುಷ್ಯನೇ ಸೃಷ್ಟಿಸಿದ ಹಣ ಮನುಷ್ಯನನ್ನು ಕಬಳಿಸುತ್ತಿದೆ. ಮನುಷ್ಯನೇ ಸೃಷ್ಟಿಸಿದ ಕೃತಕ ಬುದ್ಧಿ ಶಕ್ತಿ (AI) ಮನುಷ್ಯನನ್ನೇ ಮೀರಿನಿಂತಿದೆ, 'ನೀನಾರಿಗಾದೆಯೋ ಹುಲು ಮಾನವ' ಎಂದು ಮೂದಲಿಸುವಂತಾಗಿದೆ. ಕೊನೆಗೆ ಅದಕ್ಕೂ ಭಸ್ಮಾಸುರನ ಕತೆಯೇ ಆಗಬಹುದು!

ಶ್ರೀರಾಮಕೃಷ್ಣರು ಕಪ್ಪೆಯ ಉದಾಹರಣೆಯನ್ನೇ ಏಕೆ ಕೊಟ್ಟರು ಎಂಬುದು ವಿಚಾರಾರ್ಹ. ಕಪ್ಪೆಯು ತನ್ನದೇ ಕಿರುವಲಯದಲ್ಲಿದ್ದು ಅದೇ ಸರ್ವಸ್ವ ಎಂದು ಹೆಮ್ಮೆ ಪಡುವುದಕ್ಕೆ ಸಂಕೇತ. ಅದಕ್ಕಾಗಿಯೇ 'ಕೂಪಮಂಡೂಕ' ಕತೆಯಿರುವುದು. ಭಾರತದ ಅವನತಿಗೂ ಈ ಕೂಪಮಂಡೂಕನೇ ಕಾರಣ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಸಮುದ್ರ ದಾಟಬಾರದೆಂಬ ನಿಯಮ ಹಾಕಿಕೊಂಡು ಭಾರತೀಯರು ಹೊರದೇಶಗಳಿಗೆ ಹೋಗಲೇ ಇಲ್ಲ, ಹೊರದೇಶಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅರಿಯುವ ಗೋಜಿಗೇ ಹೋಗಲಿಲ್ಲ, ಬೇರೆ ಸಂಸ್ಕೃತಿಗಳೊಂದಿಗೆ ವಿಚಾರ ವಿನಿಮಯ ಮಾಡಲಿಲ್ಲ – ನೂರಾರು ವರ್ಷಗಳು ಇದೇ ಸ್ಥಿತಿ ಮುಂದುವರಿಯಿತು. ನಮ್ಮ ಧರ್ಮವೇ ಹಿರಿದು, ನಮ್ಮ ಸಂಸ್ಕೃತಿಗೆ ಮಿಗಿಲಾದುದು ಇನ್ನಾವುದೂ ಇಲ್ಲ ಎಂಬ ಮನೋಭಾವವೇ ಅವನತಿಗೆ ನಾಂದಿಯಾಯಿತು. ಯಾರು ಇತರರಿಂದ ಕಲಿಯಲು ನಿರಾಕರಿಸುತ್ತಾನೋ ಅವನು ಸತ್ತಂತೆ – ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಸ್ವಾಮೀಜಿಯ ಅಭಿಪ್ರಾಯವನ್ನೇ ಪ್ರತಿಧ್ವನಿಸುವ ಅಲ್‌ಬರುನಿ ಎಂಬ ಮುಸ್ಲಿಂ ಇತಿಹಾಸಜ್ಞನ ಹೇಳಿಕೆಯೊಂದಿದೆ. ''ಹಿಂದುಗಳು ನಂಬುತ್ತಾರೆ ನಮ್ಮ ದೇಶವಲ್ಲದೆ ಮತ್ತಾವುದೂ ಇಲ್ಲ, ನಮ್ಮಂತಹ ರಾಷ್ಟ್ರ ಇನ್ನಾವುದೂ ಇಲ್ಲ, ನಮ್ಮ ರಾಜರಿಗೆ ಹೋಲುವ ರಾಜರು ಬೇರೆಲ್ಲೂ ಇಲ್ಲ, ನಮ್ಮ ಧರ್ಮಕ್ಕೆ ಸಮಾನವಾದುದು ಮತ್ತಾವುದೂ ಇಲ್ಲ, ನಮ್ಮ ವಿಜ್ಞಾನದ ಮುಂದೆ ಇನ್ನಾವುದಿದೆ, ಎಂದು... ಅವರು ವಿದೇಶಗಳಲ್ಲಿ ಸಂಚರಿಸಿ ಬೇರೆ ಜನರೊಡನೆ ಬೆರೆತಿದ್ದರೆ, ಈ ಮನೋಭಾವವನ್ನು ಬದಲಾಯಿಸುತ್ತಿದ್ದರು. ಅವರ ಹಿಂದಿನ ಪೀಳಿಗೆಯವರು ಈಗಿನವರಷ್ಟು ಸಂಕುಚಿತ ಮನಸ್ಸಿನವರಾಗಿರಲಿಲ್ಲ.'' *(''A Survey of Indian History" By K.M. Panikkar, p.116-17)*

ಅಧಿಕಾರ ಮತ್ತು ಹಣದ ಪ್ರಭಾವದಿಂದ ವ್ಯಕ್ತಿ ಹೇಗೆ ಬದಲಾಗುತ್ತಾನೆ ಎಂಬುದಕ್ಕೆ ಶ್ರೀರಾಮಕೃಷ್ಣರ ಗೃಹಿಭಕ್ತರಾದ ದೇವೇಂದ್ರನಾಥ ಬೋಸ್‌ರ ಜೀವನ ಘಟನೆಯೊಂದು ಸಾಕ್ಷಿಯಾಗಿದೆ. ದೇವೇನ್ ಬಾಬು ಅವರು ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಒಂದು ಎಸ್ಟೇಟಿನ ಮ್ಯಾನೇಜರ್ ಆಗಿ ಕೆಲಸಕ್ಕೆ ಸೇರಿದರು. ಕೆಲಸದ ಒತ್ತಡದಿಂದಾಗಿ ಅನೇಕ ವರ್ಷ ಶ್ರೀರಾಮಕೃಷ್ಣರ ಶಿಷ್ಯರಾರನ್ನೂ ಭೇಟಿಯಾಗಿರಲಿಲ್ಲ. ಒಮ್ಮೆ ಆಕಸ್ಮಿಕವಾಗಿ ಸ್ವಾಮಿ ಅಖಂಡಾನಂದರು ಅವರನ್ನು ಸಂಧಿಸಿದಾಗ, ಅವರನ್ನು ಬೇಲೂರು ಮಠಕ್ಕೆ ಕರೆದುಕೊಂಡು ಬಂದು ಸ್ವಾಮಿ ಬ್ರಹ್ಮಾನಂದರನ್ನು ಭೇಟಿಮಾಡಿಸಿದರು. ಬ್ರಹ್ಮಾನಂದರು ದೇವೇನ್ ಬಾಬುವನ್ನು ಪ್ರೀತಿ ವಿಶ್ವಾಸಗಳಿಂದ ಮಾತನಾಡಿಸಿ ಕಳಿಸಿಕೊಟ್ಟರು. ಅನಂತರ ಅಖಂಡಾನಂದರಿಗೆ ಹೇಳಿದರು: ''ಅರೇ, ಗಂಗಾಧರ್. ನಿನ್ನ ದೇವೇನ್ ಏನಾಗಿ ಹೋಗಿದ್ದಾನೆ! ಅವನ ನಡೆನುಡಿ ಹಾವಭಾವ ಎಲ್ಲವೂ ಬದಲಾಗಿ ಹೋಗಿದೆಯಲ್ಲ. ಶ್ರೀರಾಮಕೃಷ್ಣರು ಮತ್ತು ನಿಮ್ಮನ್ನೆಲ್ಲ ಮರೆತುಬಿಟ್ಟಿದ್ದಾನೇನು?''

ಮುಂದೊಮ್ಮೆ ದೇವೇನ್ ಬಾಬುವನ್ನು ಸಂಧಿಸಿದಾಗ ಅಖಂಡಾನಂದರು ಈ ಮಾತನ್ನು ಅವರಿಗೆ ತಿಳಿಸಿದರು. ಇದು

ದೇವೇನ್‌ಬಾಬುವಿನ ಅಂತರಂಗವನ್ನು ತೀವ್ರವಾಗಿ ಕಲಕಿತು, ಅವರು ದುಃಖಾತುರರಾಗಿ ಬ್ರಹ್ಮಾನಂದರನ್ನು ಭೇಟಿಯಾಗಲು ಓಡಿದರು. ಸೇವಕರು ಒಳಗೆ ಹೋಗಿ ದೇವೇನ್ ಬಾಬು ಬಂದಿರುವುದನ್ನು ತಿಳಿಸಿ, ಬ್ರಹ್ಮಾನಂದರು ಹೊರಬರುವವರೆಗೂ ತಮ್ಮ ಅಂತರಂಗದ ತುಡಿತವನ್ನು ತಡೆಯಲಾರದೆ ತಾನೇ ಒಳಗೆ ನುಗ್ಗಿದರು. ಬ್ರಹ್ಮಾನಂದರು ಹೊರಗೆ ಬರುವುದಕ್ಕೆ ಸಿದ್ಧರಾಗಿದ್ದರು. ದೇವೇನ್ ಬಾಬುವನ್ನು ಕಂಡು ಅವರ ಎದೆಯ ಮೇಲೆ ತಮ್ಮ ಹಸ್ತವಿರಿಸಿ, ಕೆಲಕ್ಷಣ ಮೌನವಾಗಿದ್ದು ಮತ್ತೆ ಹೇಳಿದರು.: ''ಏನಾಗಿ ಹೋಯಿತು ದೇವೇನ್ ಬಾಬು? ಎಲ್ಲವೂ ಸರಿಯಾಗಿಬಿಡುತ್ತದೆ. ಶ್ರೀರಾಮಕೃಷ್ಣರ ಸ್ಮರಣೆ ಮಾಡಿ.'' ಕೂಡಲೇ ದೇವೇನ್ ಬಾಬುವಿನಲ್ಲಿ ಅಪೂರ್ವ ಪರಿವರ್ತನೆ ಉಂಟಾಯಿತು. ರಾಜಾ ಮಹಾರಾಜರಿಗೆ ಪ್ರಣಾಮ ಮಾಡಿ ಹೇಳಿದರು, ''ಮಹಾರಾಜ್, ನನ್ನ ಅಶಾಂತಿ ಎಲ್ಲ ದೂರವಾಗಿ ಹೋಯಿತು. ನಾನು ಏನಾಗಿ ಹೋಗಿದ್ದೆ! ತಮ್ಮ ಆಶೀರ್ವಾದ ಕೃಪೆಯಿಂದಾಗಿ ನನ್ನ ಮನಸ್ಸಿನ ದ್ವಂದ್ವ ದುಃಖಗಳೆಲ್ಲವೂ ಕಣ್ಮರೆಯಾದವು.'' ಅವರು ಪ್ರಸಾದವನ್ನು ಸ್ವೀಕರಿಸಿ ನೆಮ್ಮದಿಯಿಂದ ಹಿಂದಿರುಗಿದರು. ಮುಂದೆ ಆಗಾಗ ರಾಜಾ ಮಹಾರಾಜರ ದರ್ಶನ ಪಡೆಯಲು ಬರುತ್ತಿದ್ದರು. *(ನೋಡಿ, ''ಅಂತರ್ಮುಖಿ'' ಪುಟ ೬೪-೬೫, ಪ್ರಕಟಣೆ: ಶ್ರೀರಾಮಕೃಷ್ಣ ಆಶ್ರಮ, ಮೈಸೂರು)* ಒಂದು ಆಂಗ್ಲ ಹೇಳಿಕೆಯಿದೆ: ''ನಿಮ್ಮ ಅಧಿಕಾರ ಸ್ಥಾನಮಾನಗಳ ಬಗ್ಗೆ ಸ್ವಲ್ಪವೂ ಹೆಮ್ಮೆಪಡಬೇಡಿ. ಏಕೆಂದರೆ ಚೆಸ್ ಆಟದ ನಂತರ ರಾಜ ಮತ್ತು ಸೈನಿಕರೆಲ್ಲರೂ ಒಂದೇ ಪೆಟ್ಟಿಗೆಯೊಳಗೆ ಹೋಗುತ್ತಾರೆ.''

## ಅದ್ವೈತಾನುಭವ

**ಶ್ರೀರಾಮಕೃಷ್ಣರು:** ''ಬ್ರಹ್ಮಜ್ಞಾನ ದೊರೆಯಿತು ಎಂದರೆ ಅಹಂಕಾರ ಹೊರಟು ಹೋಗುವ ಸಂಭವ. ಬ್ರಹ್ಮಜ್ಞಾನ ದೊರೆತ ನಂತರ ಮನುಷ್ಯ ಸಮಾಧಿಸ್ಥನಾಗುತ್ತಾನೆ. ಆಗ ಅತನ 'ಅಹಂ' ಎಂಬುದು ಹೊರಟುಹೋಗುತ್ತದೆ. ಅದರೆ ಈ ವಿಧದ ಜ್ಞಾನ ಸುಲಭಸಾಧ್ಯವಲ್ಲ...

''ಜಹಜು ಒಮ್ಮೆ ಸಮುದ್ರದ 'ಕಪ್ಪು ನೀರಿನ' ಕಡೆ ಹೋಯಿತು ಎಂದರೆ ಮತ್ತೆ ಅದು ಹಿಂತಿರುಗದು. ಬಳಿಕ ಅದರ ಸುದ್ದಿ ಸಮಾಚಾರವೇ ಗೊತ್ತಾಗದು. ಆದ್ದರಿಂದ ಆ ಜನರು ನಮಗೆ ಸಮುದ್ರದ ಸಮಾಚಾರ ಕೊಡಲಾರರು.

''ಒಮ್ಮೆ ಉಪ್ಪಿನ ಗೊಂಬೆಯು ಸಮುದ್ರದ ಆಳವನ್ನು ಅಳೆಯಲು ಹೋಯಿತು. ಅದು ಸಮುದ್ರಕ್ಕೆ ಕಾಲು ಹಾಕಿದುದೇ ತಡ, ಒಡನೆಯೇ ಕರಗಿಹೋಗಿ ಬಿಟ್ಟಿತು. ಈಗ ಸಮುದ್ರ ಎಷ್ಟು ಆಳವಾಗಿದೆ ಎಂಬುದನ್ನು ತಿಳಿಸಲು ಯಾರು ಉಳಿದುಕೊಂಡಿದ್ದಾರೆ? ಯಾವುದು ನಮಗೆ ಅದನ್ನು ತಿಳಿಸಬಹುದಾಗಿತ್ತೋ ಅದೇ ಸಮುದ್ರದಲ್ಲಿ ಕರಗಿಹೋಗಿಬಿಟ್ಟಿತು.''

*(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು. ೧೨೮-೨೯)*

ಬ್ರಹ್ಮಜ್ಞಾನ ಉಂಟಾಗುವುದೆಂದರೆ ವ್ಯಷ್ಟಿ-ಸಮಷ್ಟಿಗಳೆರಡೂ ಒಂದಾಗುವುದು - ನೀರಿನ ಹನಿ ಸಮುದ್ರವನ್ನು ಸೇರಿದಂತೆ. ಆ ಹನಿಯು ತನ್ನ ಪ್ರತ್ಯೇಕತೆಯನ್ನು ಕಳೆದುಕೊಳ್ಳುತ್ತದೆ, ತನ್ನನ್ನು ಕಳೆದುಕೊಳ್ಳುವುದಿಲ್ಲ. ಹಾಗೆಯೇ ಸಾಧಕನು ಬ್ರಹ್ಮಜ್ಞಾನವನ್ನು ಪಡೆದಾಗ ತನ್ನ ವ್ಯಕ್ತಭಾವವನ್ನು (individuality) ಕಳೆದುಕೊಳ್ಳುತ್ತಾನೆ, ತನ್ನನ್ನು ಕಳೆದುಕೊಳ್ಳುವುದಿಲ್ಲ.

ಮುಂಡಕೋಪನಿಷತ್ತು ಹೇಳುವಂತೆ:

**ಯಥಾ ನದ್ಯಃ ಸ್ಯಂದಮಾನಾಃ**
**ಸಮುದ್ರೇಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ ।**
**ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ**
**ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥** *(೩.೨.೮)*

''ಹೇಗೆ ನದಿಗಳು ಹರಿಯುತ್ತ ಹೋಗಿ ನಾಮರೂಪಗಳನ್ನು ಬಿಟ್ಟು ಸಮುದ್ರದಲ್ಲಿ ಅಸ್ತಂಗತವಾಗುವವೋ ಹಾಗೆಯೇ ವಿದ್ವಾಂಸನು ನಾಮರೂಪದಿಂದ ಬಿಡುಗಡೆ ಹೊಂದಿ ಪರಾತ್ಪರನಾದ ದಿವ್ಯಪುರುಷನೊಡನೆ ಒಂದಾಗುವನು.''

ನದಿಗಳಿಗೆ ವಿವಿಧ ಹೆಸರುಗಳಿರುತ್ತವೆ, ಅವು ಎರಡು ದಡಗಳಿಗೆ ಸೀಮಿತವಾಗಿರುವುದರಿಂದ ರೂಪವೂ ಇರುತ್ತದೆ. ಆದರೆ ಅವು ಸಮುದ್ರವನ್ನು ಸೇರಿದಾಗ ಈ ನಾಮರೂಪಗಳನ್ನು ಕಳೆದುಕೊಳ್ಳುತ್ತವೆ. ಹಾಗೆಯೇ ಸಾಧಕನು ಬ್ರಹ್ಮಾನುಭವವನ್ನು ಪಡೆದ ಮೇಲೆ ತನ್ನ ನಿರ್ದಿಷ್ಟ ವ್ಯಕ್ತಿಭಾವವನ್ನು ಕಳೆದುಕೊಂಡು ಪರಬ್ರಹ್ಮನೊಡನೆ ಒಂದಾಗುತ್ತಾನೆ - ಘಟವು ಒಡೆದುಹೋದ ಮೇಲೆ ಅದರೊಳಗಿರುವ ಆಕಾಶವು ಹೊರಗಿರುವ ಮಹಾಕಾಶದೊಡನೆ ಒಂದಾಗುವಂತೆ.

ಶ್ರೀರಾಮಕೃಷ್ಣರು ಉಪ್ಪಿನ ಗೊಂಬೆಯ ಉದಾಹರಣೆಯನ್ನು ಕೊಡುತ್ತಾರೆ. ಉಪ್ಪಿನ ಗೊಂಬೆಯ ಸುತ್ತ ಅದೇ ಆಕಾರದಲ್ಲಿರುವ ಪ್ಲಾಸ್ಟಿಕ್ ಕವರ್ ಹಾಕಿದ್ದರೆ ಅದು ಸಮುದ್ರದಲ್ಲಿ ಕರಗುವುದಿಲ್ಲ. ಹಾಗೆಯೇ ಉಪಾಧಿಯ ದೆಸೆಯಿಂದ ನಾವು ಭಗವಂತನೊಡನೆ ಒಂದಾಗುವುದಿಲ್ಲ. ಕೆಲವು ನದಿಗಳು ಸಮುದ್ರವನ್ನು ಸೇರಿದ ಮೇಲೂ ತಮ್ಮತನವನ್ನು ಉಳಿಸಿಕೊಳ್ಳುತ್ತವೆ. ಉದಾಹರಣೆಗೆ ಬೃಹತ್ತಾದ ಅಮೆಜಾನ್ ನದಿಯು ಸಮುದ್ರವನ್ನು ಸೇರಿದ ಮೇಲೆ ಸುಮಾರು ಐವತ್ತು ಕಿಲೋಮೀಟರ್ ದೂರದವರೆಗೂ ತನ್ನತನವನ್ನು ಉಳಿಸಿಕೊಳ್ಳುತ್ತದೆ, ಅಂದರೆ ಅಷ್ಟುದೂರದವರೆಗೆ ಸಮುದ್ರದ ನೀರು ಸಿಹಿಯಾಗಿರುತ್ತದೆ (ಕುಡಿಯಬಹುದಾಗಿರುತ್ತದೆ). ಹಾಗೆಯೇ ಕೆಲವು ಅವತಾರಪುರುಷರು ಬ್ರಹ್ಮನೊಡನೆ ಒಂದಾದ ಮೇಲೂ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳುತ್ತಾರೆ - ಲೋಕಶಿಕ್ಷಣಾರ್ಥವಾಗಿ.

**(ಮುಂದುವರಿಯುವುದು)**